**O.S.No.1955/2006 - D.W.1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.  ದಿನಾಂಕ : 07-10-2023.**

**ಮುಖ್ಯ ವಿಚಾರಣೆ -  ಪ್ರತಿವಾದಿಯ ಪರ ವಕೀಲರಿಂದ :**

**1)** ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿ ಸಾಕ್ಷಿ ನುಡಿಯುತ್ತಿದ್ದೇನೆ.

**2)** ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

**3)** ಅಸಲು ದಾವಾ ಸಂಖ್ಯೆ 180-1985 ರ ತೀರ್ಪು ಮತ್ತು ಐ-ತೀರ್ಪಿನ ದೃಢೀಕೃತ ಪ್ರತಿಯನ್ನು - ನಿ.ಡಿ.1 ಎಂದು, ಅಸಲು ದಾವಾ ಸಂಖ್ಯೆ 77-1986 ರ ಡಿಕ್ರಿಯ ದೃಢೀಕೃತ ಪ್ರತಿಯನ್ನು - ನಿ.ಡಿ.2 ಎಂದು, ಅಸಲು ದಾವಾ ಸಂಖ್ಯೆ 78-1986 ರ ತೀರ್ಪಿನ ದೃಢೀಕೃತ ಪ್ರತಿಯನ್ನು - ನಿ.ಡಿ.3 ಎಂದು, ಅಸಲು ದಾವಾ ಸಂಖ್ಯೆ 86-1986 ರ ತೀರ್ಪಿನ ದೃಢೀಕೃತ ಪ್ರತಿಯನ್ನು - ನಿ.ಡಿ.4 ಎಂದು, ಅಸಲು ದಾವಾ ಸಂಖ್ಯೆ 383-1997 ರ ಆದೇಶ ಪುಟಗಳ ದೃಢೀಕೃತ ನಕಲನ್ನು - ನಿ.ಡಿ.5 ಎಂದು, 8 ನೇ ಪ್ರತಿವಾದಿಯ ಆಧಾರ್ ಕಾರ್ಡಿನ ನೋಟರೀಕೃತ ಪ್ರತಿಯನ್ನು ಮೂಲ ದಾಖಲೆಯನ್ನು ಪರಿಶೀಲಿಸಿದ ನಂತರ – ನಿ.ಡಿ.6 ಎಂದು ಗುರುತಿಸಲಾಯಿತು. ಮೂಲ ದಾಖಲೆಯನ್ನು ಹಿಂತಿರುಗಿಸಲಾಯಿತು.

**(ವಾದಿ ಪರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲಿಗೆ  ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**